**ಸಿ.ಸಿ.ನಂ.: 35/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **21–07–2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ ಎಮ್.ಜಿ.ಎಸ್ ವಕೀಲರಿಂದ**

**1.** ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ನನಗೆ ತಿಳಿದಿದೆ. ನಾನು ಈ ಪ್ರಕರಣದಲ್ಲಿ ನಿ.ಪಿ.4 ಆರೋಪಿತನಿಗೆ ತಿಲುಪಿದೆ ಎನ್ನುವ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದಲ್ಲಿ ತಾವು ನಿಶಾನೀಕರಿಸಿಕೊಂಡ ದಾಖಾಲಾತಿಗಳನ್ನು ತೋರಿಸಲಾಗಿ, ಸದ್ರಿ ದಾಖಲಾತಿಯಲ್ಲಿ ಅಂಚೆ ಸ್ವೀಕೃತಿ ಇಲ್ಲ ಎಂದರೆ ಸರಿ.

**2.** ಎನ್.ಐ.ಆ್ಯಕ್ಟ್ ತಾಂತ್ರೀಕವಾದ ಅಪರಾಧ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ಎನ್. ಐ. ಆ್ಯಕ್ಟ ಅಡಿಯಲ್ಲಿ ಆರೋಪಿತರ ಸರಿಯಾದ ವಿಳಾಸಕ್ಕೆ ನೋಟೀಸನ್ನು ನೀಡಿ ಸದ್ರಿ ವಿಳಾಸದಲ್ಲಿ ಆರೋಪಿತನು ಇರುವ ಬಗ್ಗೆ ಅಂಚೆ ದಾಖಲಾತಿಯನ್ನು ಸಲ್ಲಿಸಬೇಕು ಎಂದರೆ ಸರಿ. ನಿಪಿ 4 ರಲ್ಲಿ ಹೇಳಿದ ವಿಳಾಸಕ್ಕೆ ನಾವು ಆರೋಪಿತನಿಗೆ ನೊಟೀಸನ್ನು ಕಳುಹಿಸಿರುತ್ತೇವೆ ಎಂದರೆ ಸರಿ. ನಿಪಿ 7 ಕಾರವಾರ ನೇವಲ ಬೆಸ್ ಪೋಸ್ಟ ಆಫೀಸಿಗೆ ಸಂಬಂಂಧಪಟ್ಟ **Track Consignment** ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಆರೋಪಿತನು ಆತನ ಮನೆಯ ವಿಳಾಸಕ್ಕೆ ಕಳುಹಿಸಿದಾಗ ಆತನು ಸ್ವೀಕರಿಸಲಿಲ್ಲ ಎಂದು ಆತನ ಕೆಲಸದ ವಿಳಾಸಕ್ಕೆ ಅಂಚೆ ಕಛೇರಿಯವರು ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ.

**3.** ನಿಪಿ 7 ರಿಂದ 9 ರವರೆಗಿನ ದಾಖಲಾತಿಗಳಲ್ಲಿ ಆರೋಪಿತನು ಕಾರವಾದ ನೇವಲ ಬೆಸ್‌ನಲ್ಲಿ ಕರ್ತವ್ಯದಲ್ಲಿ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಸದ್ರಿ ದಾಖಲಾತಿಗಳು ಆತನು ಸಾಲ ಪಡೆಯುವ ಸಂದರ್ಭದಲ್ಲಿ ನೀಡಿದ ದಾಖಲಾತಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ.

4. ಆರೋಪಿತನು ಕಾರವಾರದ ನೆವಲ ಬೆಸ್‌ನ ಅಂಚೆ ಕಛೇರಿಯ ವ್ಯಾಪ್ತಿಯಲ್ಲಿ ವಾಸ ಇರುವ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ. ನಾವು ಅಂಚೆ ಕಛೇರಿಯರಿಗೆ ಆರೋಪಿತನಿಗೆ ಕಳುಹಿಸಿದ ನೋಟೀಸನ ಸ್ವೀಕೃತಿಯ ಪ್ರತಿ ವಾಪಸ್ಸು ಬರದೇ ಇರುವ ಬಗ್ಗೆ ಅಂಚೆ ಕಛೇರಿಗೆ ಯವುದೇ ಪತ್ರ ವ್ಯವಹಾರ ನಡೆಸಿದ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಿಪಿ 4 ರಲ್ಲಿ ನಮೂದಿಸಿದ ಪಿನ್ ಕೋಡ್‌ನ ವ್ಯಾಪ್ತಿಯಲ್ಲಿ ಬರುವ ಅಂಚೆ ಕಛೇರಿಗೆ ಸಂಬಂಧಿಸಿದ ನಿಪಿ 7 ನ್ನು ಹಾಜರುಪಡಿಸಿರುವ ಬಗ್ಗೆ ನನ್ನ ಗಮನದಲ್ಲಿ ಇರುತ್ತದೆ. ನಿಪಿ 7 ರ ಆಧಾರದ ಮೇಲೆ ಆರೋಪಿತನಿಗೆ ನೋಟೀಸ ಜ್ಯಾರಿಯಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸ್ವದ್ರಿ ವಿಷಯಕ್ಕೆ ಸಂಭಂಧಿಸಿದಂತೆ ನಾನು ಸಕ್ಷಮ ವ್ಯಕ್ತಿ ಅಲ್ಲದೇ ಇದ್ದರೂ ಕೂಡ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಸಂಸ್ಥೆಯ ಗೋಕರ್ಣ ಶಾಖೆಯ ಕಾರ್ಯ ವ್ಯಾಪ್ತಿಯು ಗೋಕರ್ಣವನ್ನು ಒಳಗೊಂಡಂತೆ ಕುಮಟಾ ಹಾಗೂ ಅಂಕೋಲಾ ವ್ಯಾಪ್ತಿಗೆ ಒಳಗೊಂಡಂತೆ ಸಾಲವನ್ನು ನೀಡಬಹುದು. ನಮ್ಮ ಶಾಖೆಗೆ ಒಳಪಟ್ಟಂತಹ ಕುಮಟಾ ಹಾಗೂ ಅಂಕೋಲಾ ತಾಲೂಕಿನ ಎಲ್ಲಾ ಗ್ರಾಮ ಹೆಸರುಗಳು ನನಗೆ ಗೊತ್ತಿದೆ. ಕಾರವಾರ ಹಾಗೂ ಅರ್ಗ ವ್ಯಾಪ್ತಿಯು ನಮ್ಮ ಶಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದರೆ ಸಾಕ್ಷಿಯು ಕಾರವಾರ ಹಾಗೂ ಅರ್ಗ ವ್ಯಾಪ್ತಿಗೆ ನಾವು ಸಾಲವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸ್ವದ್ರಿ ಎರಡೂ ಗ್ರಾಮಗಳು ಬೇರೆ ಬೇರೆ ಎಂಬುವುದು ನಮಗೆ ತಿಳಿದಿದೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

**ಸಿ.ಸಿ.ನಂ.: 35/2025**

ಪಿ.ಡಬ್ಲ್ಯೂ: 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ